ಶೌಚಾಲಯ ವ್ಯವಸ್ಥೆ ಮತ್ತು ನಾಲ್ಕು ವಸತಿಗೃಹಗಳಿಗೆ ಒಂದರಂತೆ ನೀರು ಸರಬರಾಜು ಕೊಳಾಯಿ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯುತ್, ರಸ್ತೆ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಈ) ಕಾರಾಗೃಹಗಳ ಆಧುನೀಕರಣ 2ನೇ ಹಂತದ ಪರ್‌ಸ್ಪೆಕ್ಟಿವ್ ಯೋಜನೆ ಅಡಿಯಲ್ಲಿ 40 ಸಂಖ್ಯೆ ಹೊಸ ವಸತಿಗೃಹಗಳನ್ನು ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ನಿರ್ಮಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಡಿ ಸಿ ಸಿ ಬ್ಯಾಂಕ್ ಜ್ಯೂಬಿಲಿ ಆಚರಣೆ

197(304) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:(ಜಮಖಂಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಡಿ.ಸಿ.ಸಿ. ಬ್ಯಾಂಕ್‌ನವರು ವಜ್ರಮಹೋತ್ಸವ ಕಾರ್ಯಕ್ರಮದ ಆಚರಣೆಗಾಗಿ 1993ರಲ್ಲಿ ಅಖಂಡ ಜಿಲ್ಲೆಯ ಸಹಕಾರ ಸಂಘಗಳಿಂದ (VSS) ಹಣ ಸಂಗ್ರಹಿಸಲಾಗಿದೆಯೇ? ಹಾಗಿದ್ದಲ್ಲಿ ಸಂಗ್ರಹಿಸಿದ ಹಣವೆಷ್ಟು?

ಆ) ಈ ಕಾರ್ಯಕ್ರಮ ನಡೆದಿಲ್ಲವಾದ್ದರಿಂದ ಸಂಗ್ರಹಿಸಿದ ಹಣವನ್ನು ಆಯಾ ಸಂಘಗಳಿಗೆ ಹಿಂದಿರುಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಲಕ್ಷ್ಮಣ ಸ ಸವದಿ(ಸಹಕಾರ ಸಚಿವರು):

ಅ) ಅವಿಭಜಿತ ಬಿಜಾಪುರ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳಿಂದ ಹಾಗೂ ಇತರೆ ಸಹಕಾರ ಸಂಘ/ಸಂಸ್ಥೆಗಳಿಂದ ವಜ್ರ ಮಹೋತ್ಸವ ಸವಿನೆನಪಿನ ಸಂಚಿಕೆಗಾಗಿ ರೂ.51,82,000/– ವಂತಿಗೆ ಸಂಗ್ರಹಣ ಮಾಡಿರುತ್ತಾರೆ.

ಆ) ಈ ಕಾರ್ಯಕ್ರಮ ನಡೆದಿಲ್ಲವಾದ್ದರಿಂದ ಮತ್ತು ಬಿಜಾಪುರ ಜಿಲ್ಲೆ ವಿಭಜನೆಯಾಗಿ ಪ್ರತ್ಯೇಕ ಎರಡು ಬ್ಯಾಂಕುಗಳು ಅಗಿರುವುದರಿಂದ ಸಂಗ್ರಹಿಸಿದ ಹಣವನ್ನು ಆಯಾ ಸಂಘಗಳಿಗೆ ಹಿಂದಿರುಗಿಸಲು ಬ್ಯಾಂಕಿಗೆ ಸೂಚನೆ ನೀಡಲಾಗಿದೆ.

ಭದ್ರಾ ನದಿ ನೀರು ಕಲುಷಿತ

198(310) ಶ್ರೀ ಕುಮಾರಸ್ವಾಮಿ ಕೆ ಜಿ:(ಶಿವಮೊಗ್ಗ ಗ್ರಾಮಾಂತರ) ಮಾನ್ಯ ಬಂದರು, ಒಳನಾಡು ಜಲಸಾರಿಗೆ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?